
ಇಂಜಿನಿಯರಿಂಗ್ ಓದುವಾಗ ಹೆಚ್ಚಾಗಿ ಹೊರಗಡೆಯ ಚಟುವಟಿಕೆಗಳಲ್ಲಿಯೇ ತೊಡಗಿದ್ದರಿಂದ ಗೆಳೆಯರು, ಅಧ್ಯಾಪಕರು ನನ್ನನ್ನು ಗಂಭೀರ ವಿದ್ಯಾರ್ಥಿ ಎಂದು ಪರಿಗಣಿಸಿರಲಿಲ್ಲ. ಪತ್ರಿಕೆಗಳಲ್ಲಿ ಬರೆಯುತ್ತೇನೆಂದು ಒಂದೆರಡು ಗ್ರಾಮಿನಷ್ಟು ಗೌರವಿಸುತ್ತಿದ್ದರು, ಅಷ್ಟೇ.

ಒಮ್ಮೆ ನಮ್ಮ ಪರೀಕ್ಷೆಗಳು ಮುಗಿದ ಅನಂತರ ಕಲಬುರ್ಗಿಗೆ ಮೌಲ್ಯಮಾಪನಕ್ಕೆ ಹೋಗಿಬಂದ ಅಧ್ಯಾಪಕರೊಬ್ಬರು, “ನಿನ್ನ ಆರ್ಕಿಟೆಕ್ಚರ್ ಉತ್ತರ ಪತ್ರಿಕೆಯನ್ನು ನಾನೇ ಮೌಲ್ಯಮಾಪನ ಮಾಡಿದೆ” ಎಂದು ಹೇಳಿ ಅಚ್ಚರಿ ಹುಟ್ಟಿಸಿದರು. ಉತ್ತರ ಪತ್ರಿಕೆ ಯಾವ ವಿದ್ಯಾರ್ಥಿಯದು ಎಂಬ ಗುರುತು ಮೌಲ್ಯಮಾಪಕರಿಗೆ ಸಿಗದಿರಲೆಂದೇ ಎಲ್ಲೂ ವಿದ್ಯಾರ್ಥಿ ಹೆಸರು ಇರದಂತೆ ಕೋಡುಸಂಖ್ಯೆ ಬಳಸಲಾಗುತ್ತದೆ. ಹೀಗಿರುವಾಗ ಇವರು ನನ್ನ ಉತ್ತರ ಪತ್ರಿಕೆ ಗುರುತಿಸಿದ್ದು ಹೇಗೆ?

ಇದನ್ನು ಸಾಧ್ಯವಾಗಿಸಿದ್ದು ನಾನು ಬಳಸಿದ್ದ ಕಪ್ಪುಮಸಿ! ನನ್ನ ‘ಕಪ್ಪುಮಸಿ ಪ್ರೇಮ ಪ್ರಕರಣ’ ಕ್ಯಾಂಪಸ್ಸಿನಲ್ಲಿ ಬಹಳಷ್ಟು ಹರಿದಾಡಿತ್ತು. ಆ ಸಮಯದಲ್ಲಿ ನಾನು ಬರೆದಿದ್ದ ‘ಪ್ರೀತಿ ನೆಲದಡಿಯ ನದಿಯಂತೆ’ ಎಂಬ ಕತೆಗಿಂತ ನನ್ನ ಕಪ್ಪುಮಸಿ ಮೋಹವೇ ಹೆಚ್ಚು ಪ್ರಚಾರ ಪಡೆದಿದ್ದು ವಿಪರ್ಯಾಸವೇ ಸರಿ. ನನ್ನ ಪೆನ್ನಿನ ಕಪ್ಪು ಮಸಿಯಿಂದ ಆ ಅಧ್ಯಾಪಕರು ನನ್ನ ಉತ್ತರ ಪತ್ರಿಕೆಯನ್ನು ಪತ್ತೆ ಹಚ್ಚಿದ್ದರು. ಅದು ನನ್ನಿಷ್ಟದ ಥಿಯರಿ ವಿಷಯ ಆಗಿದ್ದರಿಂದ ಹಲವು ಸಪ್ಲಿಮೆಂಟ್ ಶೀಟುಗಳನ್ನು ಕಟ್ಟಿ ಜಗಿದು ಬರೆದಿದ್ದೆ. ಆದರೆ, ಅವರಿಗೆ ಮೆಚ್ಚುಗೆಯಾಗಿದ್ದು ನಾನು ಬಳಸಿದ ಪೆನ್ನಿನ ಕಪ್ಪು ಮಸಿಯೋ ಅಥವಾ ನಾನು ಬರೆದ ವಿಷಯವೋ ಎಂಬ ಅನುಮಾನಕ್ಕೆ ನನಗೆ ಉತ್ತರ ಸಿಕ್ಕಿಲ್ಲ. ಉತ್ತರ ಭಾರತದ ವಿಶ್ವವಿದ್ಯಾಲಯವೊಂದರ ಕುಲಪತಿಯಾಗಿರುವ ಆ ಅಧ್ಯಾಪಕರು ಸಿಕ್ಕರೆ ಈಗಲೂ ಈ ಪ್ರಶ್ನೆ ಕೇಳುವ ಮನಸ್ಸಿದೆ.



ಕಪ್ಪು ಬಣ್ಣ ಪ್ರಮುಖವಾಗಿ ಕಪ್ಪುಪಟ್ಟಿ, ಕಪ್ಪುಬಾವುಟ, ಕಪ್ಪುಬಟ್ಟೆ ರೂಪದಲ್ಲಿ ಪ್ರತಿಭಟನೆಯ ಸಂಕೇತವಾಗಿ ಬಳಸಲ್ಪಡುತ್ತದೆ. ಕನ್ನಡ ಹೋರಾಟಗಾರರು ಕನ್ನಡೇತರ ಫಲಕಗಳಿಗೆ ಕಪ್ಪು ಬಣ್ಣ ಬಳಿಯುವುದನ್ನು ಕಾಣುತ್ತೇವೆ. ಕೆಲವು ಕನ್ನಡ ವಿರೋಧಿಗಳ ಮುಖಕ್ಕೂ ಕಪ್ಪು ಮಸಿ ಬಳಿಯುವ ಪರಿಪಾಠವಿದೆ. ಹಲವೆಡೆ ಕಪ್ಪು ಅಶುಭ ಮತ್ತು ದುಃಖದ ಸೂಚನೆಯೂ ಹೌದು. ಸತ್ತವರ ತಿಥಿಯ ಆಹ್ವಾನ ಪತ್ರಿಕೆಗಳನ್ನು ಸಾಮಾನ್ಯವಾಗಿ ಕಪ್ಪುವರ್ಣದಲ್ಲೇ ಮುದ್ರಿಸಲಾಗುತ್ತದೆ. ಹೀಗಿರುವಾಗ ನನ್ನ ಕಪ್ಪುಮಸಿ ಪ್ರೇಮವನ್ನು ಯಾವ ಗುಂಪಿಗೆ ಸೇರಿಸಬೇಕೆಂದು ನಿರ್ಧರಿಸುವುದು ಅನಿವಾರ್ಯವಾದರೆ ಒಂಬತ್ತು ಸದಸ್ಯರ ಪೂರ್ಣಪೀಠಕ್ಕೇ ವಹಿಸಬೇಕಾಗಬಹುದು.

ಬಾಲ್ಯ ಮತ್ತು ಶಿಕ್ಷಣದ ಹಂತದಲ್ಲಿ ಮಾತ್ರವಲ್ಲ, ಈ ಇಂಕುಪೆನ್ನು, ಅದರಲ್ಲೂ ಕಪ್ಪು ಇಂಕುಪೆನ್ನು ನಾನು ಮೊದಲ ನೌಕರಿ ಸೇರುವಾಗಲೂ ತನ್ನ ಪಾತ್ರವನ್ನು ದಕ್ಷವಾಗಿ ನಿರ್ವಹಿಸಿದೆ. ಬಂದುಹೋಗುವ ಖರ್ಚು ಕೊಡುವ ಭರವಸೆಯೊಂದಿಗೆ ಸಂದರ್ಶನಕ್ಕೆ ಆಹ್ವಾನಿಸಿದ್ದರಿಂದ ಬೆಂಗಳೂರಿನ ದಿನಪತ್ರಿಕೆಯ